doc-548
T.P-2

Reg No B G 155 30 11 72

The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವಾತಂತ್ರ್ಯ ಪೂರ್ವ
ಮಹೋತ್ಸವ
ಸಂದರ್ಭದಲ್ಲಿ
ಪ್ರಕಟವಾದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪ,ಸ

ಆಂಧ್ರದಲ್ಲಿ ಶಾಸನಭಂಗ ಮಾಡುವುದಕ್ಕೆ ಕರೆ

ಪುರಸಭಾ ಕಛೇರಿ, ಮೈಸೂರು
ತಾರೀಖು : 18-11-1972
ನಂ ಸಿ. ಪಿ ಆರ್ 87 72-73
ಆಬ್ ಸ್ಯಾಕ್ಟ್ ಟಿಂಡರ್

ನೋಟಿಫಿಕೇಷನ್

ಈ ಮೂಲಕ ತಿಳಿಯಪಡಿಸುವುದೇನೆಂದರೆ– 1973-74 ನೇ ಸಾಲಿಗೆ (ಅಂದರೆ ತಾರೀಖು: 1-2-1973 ರಿಂದ 31-1-1974 ರ ಅಖೈರವರೆಗೆ) ಮೈಸೂರು ಪುರಸಭೆಯ ಆಡಳಿತಕ್ಕೆ ಒಳಪಟ್ಟ ಹೆಲ್ತ್ ಇಲಾಖೆ ಮತ್ತು ಸೂಯೇಜ್ ಫಾರಂ ಎತ್ತುಗಳಿಗೆ ಬೇಕಾಗುವ ಸುಮಾರು 380 ಕ್ವಿಂಟಾಲ್ ಹಸಿನಾವು ಹುರುಳಿ ಮತ್ತು 30 ಕ್ವಿಂಟಾಲ್ ಉಪ್ಪನ್ನು ಸರಬರಾಜು ಮಾಡಲು ಸೀಲಾದ ಟೆಂಡರುಗಳನ್ನು ತಾ: 23-12-1972 ನೇ ಶನಿವಾರದ ದಿವಸ ಮಧ್ಯಾಹ್ನ 4 ಘಂಟೆಯವರೆಗೆ ಮುನಿಸಿಪಲ್ ಕಮೀಷನರ್ ರವರಿಂದ ಸ್ವೀಕರಿಸಲಾಗುತ್ತೆ. ಅಪೇಕ್ಷೆಯುಳ್ಳವರು ಐದು ನೂರು (ರೂ 500, ರೂಪಾಯಿ ಟೆಂಡರ್ ಡಿಪಾಜಿಟ್ಟನ್ನು ಮುನಿಸಿಪಲ್ ಖಜಾನೆಗೆ ಮಧ್ಯಾಹ್ನ 3 ಘಂಟೆಯೊಳಗೆ ಪಾವತಿ ಮಾಡಿದ ಸರ್ಟಿಫೈಡ್ ಚೆಲನ್ ಸಮೇತ ತಮ್ಮ ಟೆಂಡರುಗಳನ್ನು ಕೊಡಬಹುದು. ಹೆಚ್ಚಿಗೆ ವಿವರಗಳನ್ನು ಆಫೀಸ್ ವೇಳೆಯಲ್ಲಿ ಪಡೆಯಬಹುದು, ಮತ್ತು ನೋಟೀಸ್ ಬೋರ್ಡಿನಲ್ಲಿ ಕಾಣಬಹುದು

(ಸಹಿ) ಜೆ. ಪಿ. ಶರ್ಮ
ಮುನಿಸಿಪಲ್ ಕಮೀಷನರ್

ಡಾ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ॥ ಎಂ. ಸಿ ಮೋದಿ (ಭಾರತಾಧ್ಯಕ್ಷರ ಗೌ॥ ನೇತ್ರ ವೈದ್ಯರು) ಮಹಾರಾಷ್ಟ್ರದಲ್ಲಿನ ಗೌಂಡಿಯಾದಲ್ಲಿ 2-12-1972 ರಂದು ನೇತ್ರ ಆಪರೇಷನ್ ಕ್ಯಾಂಪ್ ನಡೆಸುವರು.

ಇವರೆಂಥಾ ಅಧಿಕಾರಿಗಳು !

ನವದೆಹಲಿ— ಸಿಬಿಐ ತನಿಖೆ ಫಲವಾಗಿ ಈ ವರ್ಷದ ಪ್ರಥಮ 10 ತಿಂಗಳಲ್ಲಿ 800 ಅಧಿಕಾರಿಗಳು ಶಿಕ್ಷಿಸಲ್ಪಟ್ಟರು.

★

ಬೆಳ್ಳಿ ನಾಣ್ಯ

ನವದೆಹಲಿ— 2 ಮಿಲಿಯ ರೂ. 10 ರ ಬೆಳ್ಳಿ ನಾಣ್ಯ ತಯಾರು ಮಾಡುವದನ್ನು ಚಿಲ್ಲರೆ ನಾಣ್ಯಗಳ ಅಭಾವದಿಂದ ಪಾರಾಗುವವರೆಗೆ ನಿಲ್ಲಿಸಲಾಗಿದೆಯೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

70 ನೇ ವರ್ಷದಲ್ಲಿ ಗರ್ಭಿಣಿ

ಬ್ಯಾಂಕಾಕ್– 53 ವರ್ಷದ ಮಗನಿರುವ, ಮೊಮ್ಮಕ್ಕಳಿರುವ, 70 ವರ್ಷದ ಸತಿ ಥಾಂಗ್ ರೂಎಸ್ಡಿ ಎಂಬ ಮಹಿಳೆಯು ತಾನು 5 ತಿಂಗಳ ಗರ್ಭಿಣಿ ಎಂದು ಪ್ರಕಟಿಸಿರುವಳು – ಕೆಲ ಕಾಲದ ಹಿಂದೆ ಈಕೆಯ ಪ್ರಥಮ ಪತಿ ತೀರಿಹೋಗಿದ್ದು, ವಿಧವೆಯಾಗಿದ್ದ ಈಕೆ ಮತ್ತೆ ಈಚೆಗೆ 65 ವರ್ಷದ ಹೊಗೆಕೊಪ್ಪು ಮತ್ತು ಮೆಣಸಿನ ಕಾಯಿಯ ಕಾರ್ಮಿಕನನ್ನು ವಿವಾಹವಾದಳು – ಈಕೆಯನ್ನು ಪರೀಕ್ಷಿಸಿದ ಹಲವು ವೈದ್ಯರು ಈಕೆಯು ಗರ್ಭಿಣಿ ಎಂಬುದನ್ನು ಸ್ಪಷ್ಟಪಡಿಸಿರುವರು

ನ್ಯಾಯ ಬೆಲೆ ಅಂಗಡಿಗಳು

ಬೆಂಗಳೂರು— ಕೋಲಾರ ಜಿಲ್ಲೆಯಲ್ಲಿ 726 ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲಾಗಿದೆ— ಕೆಲವು ತಿಂಗಳ ಕೆಳಗೆ ತೀವ್ರವಾಗಿದ್ದ ಗೊಬ್ಬರದ ಪರಿಸ್ಥಿತಿ ಈಗ ಉತ್ತಮಗೊಂಡಿದೆ

★

ಮೇವು ಸರಬರಾಜು

ಬೆಂಗಳೂರು— ಮುಖ್ಯ ಮಂತ್ರಿಗಳ ನೇತೃತ್ವದಲ್ಲಿಯ ಸರಕಾರೇತರ ಪರಿಹಾರ ಸಂಸ್ಥೆಯು ಗುಲ್ಬರ್ಗ ಮತ್ತು ಬೀದರ್ ಅಭಾವಪೀಡಿತ ಭಾಗಗಳಿಗೆ 454 ಲಾರಿ ತುಂಬ ಮೇವು ಕಳುಹಿಸಿದೆ.

★

ಟ್ರಾಕ್ಟರ್ ವಾಪಸ್ಸು

ಬಳ್ಳಾರಿ— ಹಾಯಬೂರು ಜಿಲ್ಲೆಯ 50 ಮಂದಿ ಭೂಮಾಲೀಕರು ಅಗ್ರೋ-ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಿಂದ ತಾವು ಕಂತಿನ ಮೇಲೆ ಪಡೆದು, ಕೆಲವು ಕಂತುಗಳನ್ನು ಪಾವತಿಮಾಡಿರುವ, ಟ್ರಾಕ್ಟರುಗಳನ್ನು ಕಾರ್ಪೊರೇರ್ಷಗೆ ಒಪ್ಪಿಸಿಬಿಟ್ಟು, ಭೂಸರಿಮಿತಿ 10-20 ಎಕ್ರೆ ಆದರೆ. ಟ್ರಾಕ್ಟರುಗಳು ತಮಗೆ ಹೆಣಭಾರವಾಗುವುದೆಂದು ತಿಳಿಸಿದರು

○

ವಿದ್ಯಾರ್ಥಿ ಚಳವಳಿ

ಹುಬ್ಬಳ್ಳಿ— ಖಾಸಗಿ ಕಾಲೇಜಿನ ವಿದ್ಯಾರ್ಥಿಗಳ ಶುಲ್ಕ ಕಡಮೆಯಾಗಬೇಕೆಂಬ ಚಳವಳಿ ರಾಜ್ಯದ ಇತರ ಕಡೆಗಳಿಗೂ ಹರಡುತ್ತಿದೆ – ನಿನ್ನೆ ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿಗಳ ಮೇಲೆ ಲಾಠಿ ಹೊಡೆತ ನಡೆಯಿತು – ಬೆಳಗಾಂನಲ್ಲಿ ವಿದ್ಯಾರ್ಥಿಗಳು ವಿದ್ಯಾ ಸಂಸ್ಥೆಗಳನ್ನು ಮುಚ್ಚಲಂ ಕೇಳಿಕೆ ಹಾಕಿದರು; ಪೋಲೀಸರ ಮೇಲೆ ವಾಹನಗಳ ಮೇಲೆ ಕಲ್ಲುಬೀರಾಟ ನಡೆಯಿತು – ಬಿಜಾಪುರದಲ್ಲಿ ವಿದ್ಯಾರ್ಥಿಗಳ ಮುಷ್ಕರ ಶಾಂತಿಯುತವಾಗಿ ನಡೆಯಿತು; ಗಾಂಧಿ ಸ್ಮಾರಕ ಮುಂದೆ 2 ನೇ ತಂಡ ಉಪವಾಸ ಪ್ರಾರಂಭಿಸಿತು – ಬಾಗಲಕೋಟೆಯಲ್ಲಿ ಇಂದು ಬಂದ್‌ಗೆ ಕರೆಕೊಡಲಾಗಿದೆ – ಗೋಕಾಕ್‌ನಲ್ಲಿ ವಿದ್ಯಾರ್ಥಿಗಳು ತರಗತಿಗಳಿಗೆ ಹೋಗದೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

○

ಶಾಸನೋಲ್ಲಂಘನೆ

ಹೈದರಾಬಾದು— ಆಂಧ್ರಪ್ರದೇಶ ಶಾಸನ ಸಭಾ ಕಾಂಗ್ರೆಸ್ ಪಾರ್ಟಿಯು ಪ್ರಧಾನಿಯವರ ಮುಲ್ಕಿ ಪಂಚ ಸೂತ್ರಗಳ ದೃಢೀಕರಿಸಲು ಡಿಸೆಂಬರು 1 ರಂದು ಸಭೆ ಕರೆದಿದೆ – ಕಮ್ಯೂನಿಸ್ಟೇತರ ವಿರೋಧ ಪಕ್ಷಗಳ ನೇತೃತ್ವದಲ್ಲಿ ಆಂಧ್ರ ಪ್ರಜಾ ಪರಿಷತ್ತು ಮತ್ತು ತೆಲಂಗಾಣಾ ಪ್ರಜಾ ಸಮಿತಿಗಳು ಎರಡು ಭಾಗಗಳಲ್ಲೂ ಆಡಳಿತವನ್ನು ನಿಸ್ಸತ್ವಗೊಳಿಸಲು ಶಾಸನೋಲ್ಲಂಘನ ಚಳವಳಿಗೆ ಪ್ರತ್ಯೇಕ ಕರೆ ಕೊಟ್ಟಿವೆ – ಪರಸ್ಪರ ಒಪ್ಪಿತದಂತೆ ಆಂಧ್ರಪ್ರದೇಶದ ವಿಭಜನೆಯು ಪರಿಷತ್ತು ಮತ್ತು ಸಮಿತಿಯ ನಿಲುವಾಗಿದ್ದು ಪ್ರಧಾನಿಯವರ ಪಂಚ ಸೂತ್ರವನ್ನು ತಿರಸ್ಕರಿಸಿವೆ - ಮಂತ್ರಿಗಳ, ಶಾಸಕರ ಘೇರಾವೋ, ಹರತಾಳ, ಬಂದ್‌ಗಳ ಆಚರಣೆಗೂ ಜನತೆಗೆ ಕರೆಕೊಡಲ್ಪಟ್ಟಿದೆ.

★

ಆಹಾರ ಪರಿಸ್ಥಿತಿ

ನವದೆಹಲಿ— ದೇಶದಲ್ಲಿನ ಉತ್ಕಟ ಆಹಾರ ಪರಿಸ್ಥಿತಿ ಬಗ್ಗೆ ಲೋಕಸಭೆಯಲ್ಲಿ ಸದಸ್ಯರು ಕಟುವಾಗಿ ಟೀಕಿಸಿದರು.

●

ಸಕ್ಕರೆ ಬೆಲೆ ಏರಿಕೆ !

ನವದೆಹಲಿ— ಡಿಸೆಂಬರು 1 ರಿಂದ ನ್ಯಾಯಬೆಲೆ ಅಂಗಡಿಗಳಲ್ಲಿ ಬೆವಿ ಸಕ್ಕರೆ ಬೆಲೆ ಕಿಲೋಗೆ ರೂ 2-15 ಎಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

●

ವಿದ್ಯಾವಂತ ನಿರುದ್ಯೋಗಿಗಳಿಗೆ

ನವದೆಹಲಿ— ರಾಜ್ಯ ಮತ್ತು ಕೇಂದ್ರ ಪ್ರದೇಶಗಳಲ್ಲಿಯ ವಿದ್ಯಾವಂತ ನಿರುದ್ಯೋಗಿಗಳ ಸಹಾಯಕ್ಕಾಗಿ ಅನೇಕ ಸ್ಕೀಂಗಳಿಗಾಗಿ 72-73 ಕ್ಕೆ ರೂ 6-50 ಕೋಟಿ ನಿಗದಿಮಾಡಲಾಗಿದೆ.

ವುಡ್‌ಲಾಂಡ್ಸ್ 1 12 72 ರಿಂದ ಅಮೋಘ ಪ್ರಾರಂಭ

ಆಲ್ ಇಂಡಿಯಾ ಪಿಕ್ಚರ್ಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ದಿಲ್ ದೌಲತ್ ದುನಿಯಾ

ಪಾತ್ರ – ರಾಜೇಶ್ ಖನ್ನ, ಸಾಧನ, ಅಶೋಕ ಕುಮಾರ್, ಹೆಲ್ಕ,
ಓಂ ಪ್ರಕಾಶ್ ಸಂಗೀತ : ಶಂಕರ್ ಜೈಕಿಷ್ಣ ದಿನ 3 ಪ್ರದರ್ಶನಗಳು

ಜೆಳಗಿನ ಪ್ರದರ್ಶನ 10–30 ಬೊಲಾದ್

ಅ ಪೆ ರಾ 1 12 72 ರಿಂದ

ಅತ್ಯಮೋಘ ಹಿಂದಿ ಗೇನ ಕಲರ್ ಚಿತ್ರ

ಏಕ್ ಬಾರ್ ಮುಸ್ಕುರದೊ

ಪಾತ್ರ : ಜಾಯ್ ಮುಖರ್ಜಿ, ತನುಜಾ, ದೇವ್ ಮುಖರ್ಜಿ
ಸಂಗೀತ – ಓ. ಪಿ. ನಯ್ಯರ್ ದಿನ 3 ಪ್ರದರ್ಶನಗಳು

Protect the Cow

Help The Gorakshana

— Humanitarian Propoganda Monthly—

Edited Printedand Published by Dharmapracharanirata M S Krishna Rao (Propretor) at the Satyavad. Press, Chamarajapuram Mysore

ಬಹಿರಾಕಾಶಕ್ಕೆ ಇಲಿಗಳು

ನವದೆಹಲಿ— ಡಿಸೆಂಬರು 17 ರಂದು ಹೊರಡುವ ಅಪೊಲೊ 17 ರ ಗಗನಯಾಮಿಗಳ ಜೊತೆಯಲ್ಲಿ 5 ಇಲಿಗಳು 13 ದಿನಗಳ ಚಂದ್ರಲೋಕಪ್ರವಾಸವಲ್ಲಿರುವವೆಂದು ಪ್ರಕಟವಾಗಿದೆ.

★

ತಕ್ಷೀರುಗಳ ಸುರಿಮಳೆ

ಪಶ್ಚಿಮ ಜರ್ಮನಿಯಲ್ಲಿ ಕಳೆದ ವರ್ಷ 1205 ಖೂನಿಗಳೂ, 6555 ಸ್ತ್ರೀಯರ ಮೇಲಿನ ಅಕ್ರಮ ಸಂಭೋಗಗಳೂ, 15164 ಮಕ್ಕಳ ಮೇಲಿನ ಲೈಂಗಿಕ ಅತ್ಯಾಚಾರಗಳೂ, 972 ಬ್ಯಾಂಕು ಪೋಸ್ಟಾಫೀಸು ಅಥವಾ ಸಂಸ್ಥೆಗಳ ಮೇಲೆ ಧಾಳಿ, 1608645 ಕಳ್ಳತನ ನಡೆದಿವೆ.

ಕಛೇರಿಯಲ್ಲಿ ಹೆಚ್ಚು ಸದ್ದಿರಬಾರದು

ಜರ್ಮನಿಯ ಡಾಕ್ಟರುಗಳ ಅಭಿಪ್ರಾಯದಂತೆ ಕಚೇರಿಗಳಲ್ಲಿ ಹೆಚ್ಚು ಶಬ್ದವಿರಬಾರದು; ಹೆಚ್ಚು ಶಬ್ದವಿದ್ದರೆ ಎಂಟು ಗಂಟೆಗಳು ಕೆಲಸ ಮಾಡುವ ಗುಮಾಸ್ತರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟುಮಾಡುವುದು. ಮಿದುಳಿನ ಕೆಲಸದಲ್ಲಿ ತೊಡಗಿರುವವರು ಹೆಚ್ಚು ಸದ್ದಾದಲ್ಲಿ ತಡೆಯಲಾರರು.

ಸಿಗರೇಟು, ಬೀಡಿ ಸೇದುವವರ ಮೇಲೂ, ಹಾಗೂ ಕಾಫೀ, ಟೀ ಕುಡಿಯುವವರ ಮೇಲಂತೂ ಇದರ ಪರಿಣಾಮ ಹೆಚ್ಚಾಗಿರುತ್ತೆ. [ಎಸ್. ಐ. ಎಸ]

★

SHAKTI
SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Quality Printing Neat Binding

Lakshminarasimha Press

Sivarampet. Mysore

ಛತ್ರಿ, ರೇನ್‌ಕೋಟು, ಸೂಟು ಕೇಸು, ಹೋಲ್‌ಆಲ್, ಕಿಟ್‌ಬ್ಯಾಗ್‌ಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್ & ಮೈಸೂರು ಶಿ